

ಗೋವಿಂದ್ ನಿಹಲಾನಿ ಅವರೊಂದಿಗೆ ಬಸವರಾಜು

ಒಪ್ಪಿಸಬೇಕಿತ್ತು. ಯಾವುದನ್ನೂ ಹಾಳು ಮಾಡ ಬಾರದು ಎಂಬ ಅಚ್ಚುಕಟ್ಟುತನವನ್ನು ಅವರನ್ನು ನೋಡಿ ಕಲಿಯಬೇಕಿತ್ತು. ಪುಟ್ಟಣ್ಣ ಕಣಗಾಲ್ ಕೂಡ ಯಾವ್ಯಾವುದೋ ಕೆಲಸ ಮಾಡಿಕೊಂಡಿದ್ದು, ಆಮೇಲೆ ಪಂತುಲು ಅವರಿಗೆ ಕಾರು ಚಾಲಕರಾದರು. ಸಂಗೀತದಲ್ಲಿ ಆಸಕ್ತಿ ಹೊಂದಿದ್ದ ಅವರು ಕ್ರಮೇಣ ಚಿತ್ರರಂಗದ ಸೂಕ್ಷ್ಮಗಳನ್ನು ಕಲಿತುಕೊಂಡರು.

◆ **‘ಮಾನಸ ಸರೋವರ’ ಚಿತ್ರದಲ್ಲಿ ನೀವು ಪುಟ್ಟಣ್ಣ ಕಣಗಾಲ್ ಅವರ ಜೊತೆ ಮೊದಲಿಗೆ ಕೆಲಸ ಮಾಡಿದ ಅನುಭವ ಹೇಗಿತ್ತು?**

ನಾನು ಮದ್ರಾಸ್‌ನಲ್ಲಿ ಇದ್ದೆ. ಪುಟ್ಟಣ್ಣನವರು ಹೊಸ ಸಿನಿಮಾ ಮಾಡಲಿದ್ದಾರೆ ಎನ್ನುವುದು ಗೊತ್ತಾಯಿತು. ಸ್ನೇಹಿತರೊಬ್ಬರು ಅವರೊಟ್ಟಿಗೆ ಕೆಲಸ ಮಾಡುವಂತೆ ಸಲಹೆ ನೀಡಿದರು. ನನಗೆ ಅವರಲ್ಲಿ ಕೆಲಸ ಮಾಡಬೇಕು ಎಂದು ತಂತಾನೇ ಅನಿಸಿರಲಿಲ್ಲ. ಆದರೆ, ಅಂತಹ ನಿರ್ದೇಶಕರಲ್ಲಿ ಕಲಿಯುವುದು ಸಾಕಷ್ಟಿರುತ್ತದೆ ಎಂದು ಸಲಹೆ ಬಂದಿದ್ದರಿಂದ ಅವರನ್ನು ಭೇಟಿ ಮಾಡಿದೆ.

ಪುಟ್ಟಣ್ಣನವರಿಗೆ ನನ್ನ ಕೆಲಸ ಹಿಡಿಸಿತ್ತು. ನಾನೇ ಸಿನಿಮಾಟೊಗ್ರಫರ್ ಆಗಬೇಕು ಎಂದು ಬಯಸಿದರು. ಆ ಸಿನಿಮಾಗೆ ನಾನು ಯಾವ ರೀತಿ ಕೊಡುಗೆ ನೀಡಲು ಸಾಧ್ಯ ಎಂದು ಪ್ರಶ್ನೆ ಹಾಕಿದೆ. ಚಿತ್ರೀಕರಣ ಶುರುವಾದ ಮೇಲೆ ಯಾವ ರೀತಿಯ ಕೊಡುಗೆ ಎನ್ನುವುದು ತಾನಾಗಿಯೇ ಗೊತ್ತಾಗುತ್ತದೆ ಎಂದರು. ಚಿತ್ರದ ವಸ್ತುವಿಷಯ ಯಾವುದು ಎಂಬ ನನ್ನ ಪ್ರಶ್ನೆಗೆ ಅವರು ಉತ್ತರ ಕೊಡಲಿಲ್ಲ. ಮೊದಲು ಲೊಕೇಷನ್ ನೋಡಿಕೊಂಡು ಬರುವಂತೆ ಸೂಚಿಸಿದರು. ಅವರಿಗೆ ಆಗ ಸಹಾಯಕ ನಿರ್ದೇಶಕರಾಗಿದ್ದ ಪಿ.ಎಚ್. ವಿಶ್ವನಾಥ್ ಅವರೊಟ್ಟಿಗೆ ನಾನೂ ಹೋಗಿ ಸಂಡೂರು ಸುತ್ತಮುತ್ತಲಿನ ಲೊಕೇಷನ್‌ಗಳನ್ನು ನೋಡಿಕೊಂಡು ಬಂದೆವು. ಚಿತ್ರೀಕರಣ ಎಷ್ಟು ದಿನಗಳಲ್ಲಿ ಮುಗಿಯಬಹುದು ಎಂದು ಕೇಳಿದೆ. 35–40 ದಿನಗಳಲ್ಲಿ ಮುಗಿಯಬಹುದು ಎಂದರಾದರೂ, 70 ದಿನಗಳವರೆಗೆ ವಿಸ್ತರಣೆಯಾಯಿತು. ನನಗೆ ತಮಿಳಿನಲ್ಲಿ ಒಳ್ಳೆಯ ಸಂಭಾವನೆ ಸಿಗುತ್ತಿತ್ತು. ಇಲ್ಲಿ ಅಷ್ಟು ಕೊಡಲು ಆಗುವುದಿಲ್ಲ ಎಂದು ಅವರು ನೇರವಾಗಿ ಹೇಳಿಬಿಟ್ಟರು. ಆದರೂ ಅಂತಹ ನಿರ್ದೇಶಕರ ಜೊತೆಗೆ ಕೆಲಸ ಮಾಡುವ ಅನುಭವ ಪಡೆದುಕೊಳ್ಳೋಣ ಎಂದೇ ಕೆಲಸ ಮಾಡಿದೆ. ಆ ಸಿನಿಮಾ ಚಿತ್ರೀಕರಣದ ಅವಧಿ ವಿಸ್ತರಣೆಯಾದ ಕಾರಣ ನನಗೆ ಒಂದು ತಮಿಳು ಸಿನಿಮಾ ಕೈತಪ್ಪಿತು.

ಮುಂದೆ ‘ಧರಣಿ ಮಂಡಲ ಮಧ್ಯದೊಳಗೆ’, ‘ಅಮೃತ ಘಳಿಗೆ’ ಸಿನಿಮಾಗಳಲ್ಲೂ ಕೆಲಸ ಮಾಡಿದೆ. ‘ನಾಲ್ಕು ಸ್ತಂಭಾಲು’ ಎಂಬ ತಮಿಳು ಚಿತ್ರದ ಕಥನವನ್ನು ‘ಅಮೃತ ಘಳಿಗೆ’ಯ ವಸ್ತು ಹೋಲುತ್ತಿತ್ತು. ಆದರೆ, ಅದು ಕಾದಂಬರಿ ಆಧರಿತ ಸಿನಿಮಾ ಎಂದು ಅವರು ಸಮರ್ಥಿಸಿಕೊಂಡರು. ಅಷ್ಟೇ ಅಲ್ಲದೆ, ಆ ತಮಿಳು ಸಿನಿಮಾ ನೋಡಿ ಎಂಬ ಸಲಹೆಯನ್ನು ತಿರಸ್ಕರಿಸಿದರು. ಮುಂದೆ ಅವರು ‘ಮಸಣದ ಹೂವು’ ಮಾಡಲು ಹೊರಟಾಗ ಹಿಂದೆ ಅದೇ ವಸ್ತುವಿನ ‘ಗೆಜ್ಜೆ ಪೂಜೆ’ ಚಿತ್ರವನ್ನು ಮಾಡಿರುವಿರಲ್ಲ ಎಂದೂ ಪ್ರಶ್ನಿಸಿದ್ದೆ. ಅದು